ನಾನು ಕಂಡ **ವಿವೇಕಾನಂದ**

ಡಾ.ಆರ್. ಬಾಲಸುಬ್ರಹ್ಮಣ್ಯಂ



# ಬ್ರಹ್ಮಚರ್ಯದ ಮಾರ್ಗದಲ್ಲಿ ಹಣದ ಸಹಚರ್ಯ

ಹಣ ನಿಜವಾಗಲೂ ಒಂದು ರೀತಿಯಲ್ಲಿ ಅತ್ಯಂತ ವಿಚಿತ್ರ ವಸ್ತುವೇ ಸರಿ. ಬಹುತೇಕರು ಹಣದ ಮೇಲೆ ಪ್ರಭುತ್ವ ಸಾಧಿಸಲು ಬಯಸುತ್ತಾರೆ. ಆದರೆ ಅದು ಕ್ರಮೇಣ ತಮ್ಮ ಮೇಲೇ ಪ್ರಭುತ್ವ ಸಾಧಿಸುತ್ತದೆ ಎಂಬ ಸತ್ಯದ ಅರಿವು ಅವರಿಗೆ ಇರುವುದಿಲ್ಲ. ಸಂಬಂಧಗಳು ವ್ಯಾವಹಾರಿಕ ಆಗಿರುವ ಈ ಪ್ರಪಂಚದಲ್ಲಿ ಹಣ ಇಲ್ಲದೇ ಕಾರ್ಯ ನಿರ್ವಹಿಸುವುದು ಹೇಗೆ ಎಂಬುದನ್ನು ಯಾರೂ ಕಲ್ಪನೆ ಸಹ ಮಾಡಿಕೊಳ್ಳಲು ಸಾಧ್ಯವಿಲ್ಲ. ಹಣ ಈ ಪ್ರಪಂಚದಲ್ಲಿ ವ್ಯವಹರಿಸಲು ಇರುವ ಸಾಧನ ಮಾತ್ರವೇ ಆಗಿದ್ದರೂ ನಾವು ಬಹುತೇಕರು ಅದರ ಮೇಲೆ ಅವಲಂಬಿತರಾಗಿಬಿಟ್ಟಿದ್ದೇವೆ. ಸಂಬಂಧಗಳು ವೈಯಕ್ತಿಕ, ವೃತ್ತಿಪರ ಯಾವುದೇ ಆಗಿರಲಿ, ಯಶಸ್ಸು ಅಥವಾ ವೈಫಲ್ಯವೇ ಇರಲಿ ಇವೆಲ್ಲವನ್ನೂ ಇಂದು ಹಣದ ಜೊತೆ ಸಮೀಕರಿಸಿಯೇ ನೋಡಲಾಗುತ್ತಿದೆ.

ಗೃಹಸ್ಥರ ಬದುಕಿನಲ್ಲಿ ಹಣ ಸಂಗ್ರಹ ಮತ್ತು ಬಳಕೆಯನ್ನು ನಾವು ಸುಲಭವಾಗಿ ಸಮರ್ಥಿಸಿಕೊಳ್ಳಬಹುದಾದರೂ ಸನ್ಯಾಸಿಗಳ ಬದುಕಿನಲ್ಲಿ ಹಣದ ಪಾತ್ರ ಏನು ಎಂಬುದನ್ನು ಅರ್ಥ ಮಾಡಿಕೊಳ್ಳುವುದು ಕಷ್ಟ. ರೂಢಿಗತವಾದ ಅರ್ಥದಲ್ಲಿ ಸನ್ಯಾಸ ಎಂದರೆ ವಿರಕ್ತಿ ಮತ್ತು ಬ್ರಹ್ಮಚರ್ಯದ ಪಾಲನೆ. ಒಬ್ಬ ಸನ್ಯಾಸಿಗೆ ಹಣ ಮತ್ತು ಚಿನ್ನದ ಬಳಕೆಯ ಅಗತ್ಯ ಇಲ್ಲ, ಅವನ ದೃಷ್ಟಿಯಲ್ಲಿ ಒಂದು ತುಂಡು ಕಲ್ಲೂ ಒಂದೇ ಹಣ, ಚಿನ್ನವೂ ಒಂದೇ. ಆದರೆ ಇಂದಿನ ಪರಿಸ್ಥಿತಿಯಲ್ಲಿ ಹೀಗೆ ನಾವು ಅರ್ಥೈಸಲಾಗದು. ಈಗಿನ ಬಹುತೇಕ ಸನ್ಯಾಸಿಗಳು ಮತ್ತು ಆಶ್ರಮಗಳು ಸಮಾಜ ಸೇವಾ ಕಾರ್ಯದಲ್ಲಿ ತೊಡಗಿಕೊಂಡಿವೆ. ಹೀಗಾಗಿ ದಿನನಿತ್ಯವೂ ಅವು ಹಣದ ಜೊತೆ ಮುಖಾಮುಖಿ ಆಗಲೇಬೇಕಾಗುತ್ತದೆ. ಅವು ಕಟ್ಟಿರುವ ಸಂಸ್ಥೆಗಳಿಗೆ ನಿರಂತರವಾಗಿ ಹಣದ ದೇಣಿಗೆ ಬೇಕಾಗುತ್ತದೆ ಮತ್ತು ಹಲವು ಪ್ರಕರಣಗಳಲ್ಲಿ ಅವೇ ಸ್ವತಃ ಹಣ ಸಂಪಾದನೆ ಮಾಡಿಕೊಳ್ಳುತ್ತವೆ.

ಶ್ರೀ ರಾಮಕೃಷ್ಣ ಪರಮಹಂಸರು ಒಬ್ಬ ಅಪರೂಪದ ಸನ್ಯಾಸಿಯಾಗಿದ್ದರು. ಅವರು ಹಣ ತಮಗೇನೂ ಅಲ್ಲ ಎಂದು ಭಾವಿಸಿದ್ದುದಷ್ಟೇ ಅಲ್ಲ, ಅದನ್ನು ಕಂಡರೆ ಅವರಿಗೆ ಕಿರಿಕಿರಿಯೂ ಆಗುತ್ತಿತ್ತು. ಹಣದ ಜೊತೆ ಸಂಪರ್ಕಕ್ಕೆ ಬಂದಾಗಲೆಲ್ಲಾ ಅವರಿಗೆ ಮೈಯೆಲ್ಲಾ ಉರಿಯುವ ಅನುಭವ ಆಗುತ್ತಿತ್ತು. 'ಚಿನ್ನ' ಮತ್ತು 'ಕಾಮ' ಎರಡರ ಬಗ್ಗೆಯೂ ಸನ್ಯಾಸಿಗಳು ಅತ್ಯಂತ ಎಚ್ಚರಿಕೆಯಿಂದ ಇರಬೇಕು ಎಂದು ಅವರು ಯಾವಾಗಲೂ ತಮ್ಮ ಶಿಷ್ಯರಿಗೆ ಬೋಧಿಸುತ್ತಿದ್ದರು. ಇಂತಹ ಹಿನ್ನೆಲೆಯಿಂದ ಬಂದ ಸ್ವಾಮಿ ವಿವೇಕಾನಂದರು ಹಣದ ಜೊತೆ ಹೇಗೆ ವ್ಯವಹರಿಸಿದರು ಎಂಬುದು ಹೆಚ್ಚು ಆಸಕ್ತಿದಾಯಕವಾಗಿದೆ. ತಮ್ಮ 'ಪರಿವ್ರಾಜಕ' ದಿನಗಳಲ್ಲಿ ಅವರು ತಮ್ಮ ಬಳಿ ಹಣವನ್ನು ಇಟ್ಟುಕೊಳ್ಳುತ್ತಲೇ ಇರಲಿಲ್ಲ. ಇಂತಹ ಸಂದರ್ಭದಲ್ಲಿ ಹಲವಾರು ದಯಾಪರರು ಅವರಿಗೆ ಬೆಂಬಲ ನೀಡಿದ್ದರು. ಬಡತನವನ್ನು ಸ್ವಾಮೀಜಿ ಒಪ್ಪಿಕೊಂಡುಬಿಟ್ಟಿದ್ದರಿಂದ ಅವರಿಗೆ ಹಣದ ಅಗತ್ಯ ಇರಲಿಲ್ಲ.

ಆದರೆ ಪಾಶ್ಚಿಮಾತ್ಯ ದೇಶಕ್ಕೆ ಹೋದಾಗ ಮಾತ್ರ ಆಹಾರ, ವಸತಿಯಂತಹ ದಿನನಿತ್ಯದ ಅಗತ್ಯಗಳಿಗೂ ಹಣವಿಲ್ಲದೆ ಸಾಕಷ್ಟು ನೋವಿನ ಸಂದರ್ಭಗಳನ್ನು ಅವರು ಎದುರಿಸಬೇಕಾಯಿತು. ಷಿಕಾಗೊ ಭಾಷಣದ ನಂತರ ಜನಪ್ರಿಯರಾದ ಸ್ವಾಮೀಜಿ ಸಾರ್ವಜನಿಕ ವಲಯದಲ್ಲಿ ಹೆಚ್ಚು ಗುರುತಿಸಿಕೊಂಡರು. ಇಡೀ ಅಮೆರಿಕದಾದ್ಯಂತ ಪ್ರವಚನಕ್ಕಾಗಿ ಅವರಿಗೆ ಆಹ್ವಾನಗಳು ಬರಲಾರಂಭಿಸಿದವು. ಆಗ ಅವರು ತಮ್ಮ ಭಾಷಣಗಳನ್ನು ಆಯೋಜಿಸಿದ್ದ ಉಪನ್ಯಾಸ ಸಂಸ್ಥೆಯ ಜೊತೆ ಒಪ್ಪಂದಕ್ಕೆ ಸಹಿ ಹಾಕಿದರು. ಆದರೆ ಈ ಸಂಸ್ಥೆ ತಮ್ಮನ್ನು ಶೋಷಿಸುತ್ತಿದೆ ಎಂಬುದು ಸ್ವಲ್ಪ ಸಮಯದಲ್ಲೇ ಅವರ ಅರಿವಿಗೆ ಬಂತು. ಬಳಿಕ ಕೆಲ ಸ್ನೇಹಿತರು ಮತ್ತು ಹಿತೈಷಿಗಳ ನೆರವಿನೊಂದಿಗೆ ತಮ್ಮ ಪ್ರವಚನಗಳನ್ನು ತಾವೇ ನಿರ್ವಹಿಸಿಕೊಳ್ಳಲು ಅವರು ಮುಂದಾದರು. 1900ರ ಆರಂಭದಲ್ಲಿ ಲಾಸ್ ಏಂಜಲೀಸ್‌ನಲ್ಲಿ ಇದ್ದಾಗ, ಪ್ರವಚನಗಳಿಗೆ ಹಣ ನಿಗದಿ ಮಾಡುವ ಮೂಲಕ ಸನ್ಯಾಸ ದೀಕ್ಷೆಯ ನಿಯಮಗಳನ್ನು ಉಲ್ಲಂಘಿಸುತ್ತಿದ್ದಾರೆ ಎಂಬ ಟೀಕೆಗಳಿಗೂ ಅವರು ಗುರಿಯಾಗಬೇಕಾಯಿತು.

ತಮ್ಮ ಪ್ರಿಯ ಭಾರತದ ಬಡ ಜನರ ಉದ್ಧಾರಕ್ಕಾಗಿ ಸಂಪದ್ಭರಿತ ಪಾಶ್ಚಿಮಾತ್ಯ ದೇಶಗಳಿಂದ ಎಷ್ಟು ಸಾಧ್ಯವೋ ಅಷ್ಟು ಹಣವನ್ನು ಸಂಗ್ರಹಿಸಬೇಕು ಎಂದು ಅವರು ಅಂದುಕೊಂಡಿದ್ದರು. ಹೀಗೆ ಸಂಗ್ರಹಿಸಿದ ಹಣವನ್ನು ಹೇಗೆ ಬಳಸಬೇಕು ಎಂಬುದು ಸ್ಪಷ್ಟವಾಗಿ ತಿಳಿದಿತ್ತಾದರೂ ಸ್ವಾಮೀಜಿಗೆ ತಮ್ಮದೇ ಆದ ಕೆಲವು ಸಂದೇಹಗಳೂ ಇದ್ದವು. ಹಣ ಸಂಗ್ರಹಕ್ಕಾಗಿ ತಮ್ಮ ಪ್ರವಚನಗಳಿಗೆ ಶುಲ್ಕ ವಿಧಿಸದೇ ಬಿಟ್ಟ, ದೇಣಿಗೆಯನ್ನು ನಿರಾಕರಿಸಿದ್ದಷ್ಟೇ ಅಲ್ಲ, ಕೆಲ ಪ್ರಕರಣಗಳಲ್ಲಿ ದಾನಿಗಳಿಗೆ ಅವರ ಹಣವನ್ನು ಮರಳಿಸಿದ ಉದಾಹರಣೆಗಳೂ ಇವೆ.

ಈ ಸಂದರ್ಭದಲ್ಲಿ ಅಳಸಿಂಗ ಪೆರುಮಾಳ್ ಅವರಿಗೆ ಬರೆದ ಪತ್ರದಲ್ಲಿ 'ಬರೀ ಹಣ ಇಟ್ಟುಕೊಳ್ಳುವುದಷ್ಟೇ ಅಲ್ಲ, ಅದನ್ನು ಮುಟ್ಟುವುದೂ ನನಗೆ ಅತ್ಯಂತ ಕಷ್ಟದ ಕೆಲಸ. ಅದೊಂದು ಹೇವರಿಕೆ ಹುಟ್ಟಿಸುವ ಮತ್ತು ಚಾರಿತ್ರ್ಯ ತಗ್ಗಿಸುವ ಕೆಲಸ' ಎಂದು ಸ್ವಾಮೀಜಿ ಹೇಳಿದ್ದರು. ಕೆಲ ದಿನಗಳ ಬಳಿಕ ಮತ್ತೊಂದು ಪತ್ರ ಬರೆದಿದ್ದ ಅವರು, 'ಸಾರ್ವಜನಿಕ ಉಪನ್ಯಾಸದ ಯೋಜನೆಯನ್ನು ಸಂಪೂರ್ಣವಾಗಿ ತ್ಯಜಿಸಲು ನಿರ್ಧರಿಸಿದ್ದೇನೆ. ಸಾರ್ವಜನಿಕ ಭಾಷಣವೇ ಆಗಿರಲಿ, ಖಾಸಗಿ ತರಗತಿಗಳೇ ಇರಲಿ ಹಣದಿಂದ ಮುಕ್ತವಾಗುವುದೇ ಸರಿಯಾದ ಮಾರ್ಗ ಎಂದು ನನಗೆ ಭಾಸವಾಗುತ್ತಿದೆ' ಎಂದು ಹೇಳಿದ್ದರು.

ಆದರೆ ಎರಡನೇ ಬಾರಿಗೆ ಅವರು ಅಮೆರಿಕಕ್ಕೆ ಹೋದಾಗ ಪರಿಸ್ಥಿತಿ ಬದಲಾಗಿತ್ತು. ಜನರ ಪುನಶ್ಚೇತನ ಕಾರ್ಯಕ್ಕಾಗಿ ಭಾರತದಲ್ಲಿನ ರಾಮಕೃಷ್ಣ ಸಂಸ್ಥೆಗೆ ಹಣದ ಅವಶ್ಯಕತೆ ಇತ್ತು. ಆಗ ಹಣಕಾಸು ನಿರ್ವಹಣೆ ಮಾಡಬೇಕಾದ ಅಗತ್ಯವನ್ನು ಸ್ವಾಮೀಜಿ ಪ್ರಾಯೋಗಿಕವಾಗಿ ಅರ್ಥ ಮಾಡಿಕೊಂಡರು. ಹಣವಿಲ್ಲದೆ ಸಂಸ್ಥೆಗಳನ್ನು ಕಟ್ಟಲು ಸಾಧ್ಯವಿಲ್ಲ, ಅದೊಂದು ವಿವೇಚನೆಯಿಂದ ಬಳಸಬೇಕಾದ ಸಾಧನ ಎಂಬುದು ಸ್ಪಷ್ಟವಾಗಿತ್ತು. ತಮ್ಮ ಗುರುವಿನ ಸಂದೇಶಗಳನ್ನು ಪ್ರಚುರಪಡಿಸಲು ಸಹ ಅವರಿಗೆ ಹಣದ ಅವಶ್ಯಕತೆ ಇತ್ತು. ಅಲ್ಲಿಂದ ಅವರು ಸನ್ಯಾಸಿಯ ಹಣ ನಿರ್ವಹಣೆಯ ನೈತಿಕ ವಿಷಯವನ್ನು ಅತ್ಯಂತ ವ್ಯಾವಹಾರಿಕ ದೃಷ್ಟಿಕೋನದಿಂದ ನೋಡಲು ಆರಂಭಿಸಿದರು. ಹಣದ ಸಮರ್ಥ ಮತ್ತು ಪರಿಣಾಮಕಾರಿ ಬಳಕೆಗೆ ಗಮನ ಕೇಂದ್ರೀಕರಿಸಿದರು. ಯಾವ ಉದ್ದೇಶಕ್ಕಾಗಿ ಎಷ್ಟು ಹಣ ಸಂಗ್ರಹಿಸಬೇಕು ಎಂಬ ಬಗ್ಗೆ ಸ್ಪಷ್ಟ ನಿಯಮಗಳನ್ನು ಹಾಕಿಕೊಂಡರು. ಹೀಗೆ ಸಂಗ್ರಹಿಸಿದ ಹಣವನ್ನು ಯಾವುದಕ್ಕೆ ಬಳಸುತ್ತಿದ್ದೇವೆ ಎಂಬುದನ್ನು ದಾನಿಗಳಿಗೆ ತಿಳಿಸಬೇಕೆಂದು ಸ್ಪಷ್ಟವಾಗಿ ನಿರ್ಧರಿಸಿದರು. ತಮ್ಮ ಸಹೋದರ ಶಿಷ್ಯ ಸ್ವಾಮಿ ಶುದ್ಧಾನಂದ ಅವರಿಗೆ ಬರೆದ ಪತ್ರದಲ್ಲಿ 'ಪರಿಹಾರ ಕಾರ್ಯದಲ್ಲಿ ನಿರತರಾಗಿರುವ ಎಲ್ಲರಿಗೂ ಇದನ್ನು ಬರೆದು ತಿಳಿಸುವಂತೆ ಬ್ರಹ್ಮಾನಂದರಿಗೆ ತಿಳಿಸಿ. ಒಳ್ಳೆಯ ಕಾರ್ಯಕ್ಕಲ್ಲದೆ ಬೇರ್‍ಯಾವ ಉದ್ದೇಶಕ್ಕೂ ಹಣ ಬಳಕೆಯಾಗಲು ಅವರಿಗೆ ಅವಕಾಶ ನೀಡಬಾರದು. ಅತ್ಯಂತ ಕನಿಷ್ಠ ವೆಚ್ಚದಲ್ಲಿ ಉತ್ತಮ ಕಾರ್ಯಗಳನ್ನು ನಾವು ಮಾಡಬೇಕು' ಎಂದು ಹೇಳಿದ್ದರು.

ಹೀಗೆ ಹಣದ ಯುಕ್ತಾಯುಕ್ತ ಬಳಕೆಯನ್ನು ಸ್ವಾಮೀಜಿ ಅರ್ಥ ಮಾಡಿಕೊಂಡಿದ್ದರಾದರೂ ಅದರಲ್ಲೇ ಅವರು ಸಂಪೂರ್ಣವಾಗಿ ಮುಳುಗಿಹೋಗಲಿಲ್ಲ. 1897ರ ಜುಲೈನಲ್ಲಿ 'ಹಣ ಮತ್ತು ಇತರೆಲ್ಲವೂ ತಾನೇತಾನಾಗಿ ಬರುತ್ತವೆ. ನಮಗೆ ಮನುಷ್ಯರು ಬೇಕೇ ಹೊರತು ಹಣವಲ್ಲ. ಹಣ ಏನು ಮಾಡಬಲ್ಲದು? ಮನುಷ್ಯನೇ ಎಲ್ಲವನ್ನೂ ಮಾಡುವುದು. ಹೆಚ್ಚು ಹೆಚ್ಚು ಮಾನವ ಸಂಪನ್ಮೂಲ ದೊರೆತಷ್ಟೂ ಉತ್ತಮವಾದುದನ್ನು ನಾವು ಗಳಿಸುತ್ತೇವೆ...' ಎಂದು ಸ್ವಾಮಿ ಅಖಂಡಾನಂದ ಅವರಿಗೆ ಬರೆದಿದ್ದರು.

ಹೀಗೆ ತಮ್ಮ ಗುರಿ ಸಾಧನೆಗೆ ಹಣ ಅತ್ಯಂತ ಪ್ರಮುಖವಾದರೂ ಅದಕ್ಕಿಂತ ಅಗತ್ಯವಾದುದು 'ಮಾನವ ಸಂಪನ್ಮೂಲ' ಎಂಬ ಮಹತ್ವ ಅರಿತಿದ್ದ ಸ್ವಾಮಿ ವಿವೇಕಾನಂದರು ಅಸಾಧಾರಣ ದಾರ್ಶನಿಕ. ಅವಿವೇಕದಿಂದ ಐಶ್ವರ್ಯದ ಬೆನ್ನತ್ತಿ ಬಳಲಿರುವ ಇಂದಿನ ಸಮಾಜಕ್ಕೆ ಈಗ ಇದರ ಅರಿವಾಗುತ್ತಿದೆ. ಹೀಗಾಗಿಯೇ ಮನುಷ್ಯನ ಅಸ್ತಿತ್ವದ ಉಳಿವಿಗಾಗಿ 'ಮಾನವ ಸಂಪನ್ಮೂಲ'ವನ್ನು ಅಭಿವೃದ್ಧಿಪಡಿಸುವ ಮಾತುಗಳು ಕೇಳಿಬರುತ್ತಿವೆ. ◆